ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

**ವಿಷಯ:-** ನಿಗಮದ ಎಲ್ಲಾ ಕಾಮಗಾರಿಗಳು/ ಸೇವೆಗಳು ಮತ್ತು ಸಾಮಾಗ್ರಿಗಳ ಸಂಗ್ರಹಣಾ ಕಾರ್ಯದ ಅನುಷ್ಠಾನದಲ್ಲಿ ಠೇವಣಿ ಪಡೆಯಲು ರಿಯಾಯಿತಿ ನೀಡುವ ಕುರಿತು.

**ಓದಿದೆ:-**
1. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಆಇ/360/ವೆಚ್ಚ-12/2020 (ಇ ಆಫೀಸ್) ದಿನಾಂಕ 13/07/2020.
2. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಆಇ/360/ವೆಚ್ಚ-12/2020 (ಇ ಆಫೀಸ್) ದಿನಾಂಕ 09/09/2020.
3. ದಿನಾಂಕ 09/09/2020 ರಂದು ನಡೆ ದ 121 ನೇ ಮಂಡಳಿ ಸಭೆಯ ನಡವಳಿಗಳು.
4. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ9/2020/07-08 ದಿನಾಂಕ 02/11/2020.
5. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ19/345/85-86 ದಿನಾಂಕ 21/11/2020.
6. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಆಇ/675/ವೆಚ್ಚ-12/2020 ದಿನಾಂಕ 22/12/2020.
7. ನಿಗಮ ಕಾರ್ಯಾಲಯದ ಟಿಪ್ಪಣಿ ದಿನಾಂಕ 02/01/2021.

**ಪೀಠಿಕೆ:**

1. ಕೋವಿಡ್-19 ಮಹಾಮಾರಿ ಹಿನ್ನೆಲೆಯಲ್ಲಿ, ಸಿವಿಲ್ ಕಾಮಗಾರಿಗಳ ಅನುಷ್ಠಾನದಲ್ಲಿ ಸಡಿಲಿಕೆ/ರಿಯಾಯಿತಿ ನೀಡುವ ಬಗ್ಗೆ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ದಿನಾಂಕ 13/07/2020 ರ ಆದೇಶದಲ್ಲಿ ತಿಳಿಸಲಾಗಿದೆ. ಈ ಬಗ್ಗೆ, Standard Tender Document ನ Conditions of Contract ನಲ್ಲಿ Employer's risks ಮತ್ತು Compensation events ಗಳ clause ಗಳಡಿಯಲ್ಲಿ ಅವಧಿ ವಿಸ್ತರಿಸಲು ಹಾಗೂ ಒಪ್ಪಂದದ ಅನುಸಾರ ಪಡೆಯಲಾದ ಭದ್ರತಾ ಠೇವಣಿಗಳನ್ನು ಕೋವಿಡ್-19 ಮಹಾಮಾರಿ ಕಾರಣದಿಂದ ಕೆಲವು ಸಂದರ್ಭಗಳಲ್ಲಿ, ಕಾಮಗಾರಿ/ಸರಬರಾಜು ಪ್ರಮಾಣದ ಅನುಪಾತ (proportionate) ಕ್ಕೆ ಅನುಸಾರವಾಗಿ ಹಿಂದಿರುಗಿಸಲು ಆದೇಶಿಸಲಾಗಿದೆ.

2. ಮುಂದುವರೆದಂತೆ, ದಿನಾಂಕ 09/09/2020 ರ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆಯಲ್ಲಿ ಉಲ್ಲೇಖ (1) ರಲ್ಲಿನ ಆದೇಶದಲ್ಲಿ ತಿಳಿಸಿದ ಭದ್ರತಾ ಠೇವಣಿ ಹಿಂಪಾವತಿ ಬಗ್ಗೆ, ಕೆಲವು ಸ್ಪಷ್ಟೀಕರಣಗಳನ್ನು ನೀಡಲಾಗಿದೆ.

3. ಸರ್ಕಾರಿ ಆದೇಶದಲ್ಲಿ ಕೋವಿಡ್-19 ಮಹಾಮಾರಿ ಹಿನ್ನೆಲೆಯಲ್ಲಿ ಸಿವಿಲ್ ಕಾಮಗಾರಿಗಳ ಅನುಷ್ಠಾನದಲ್ಲಿ ಸಡಿಲಿಕೆ ನೀಡಿದ್ದು, ನಿಗಮದ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳು/ ಸರಬರಾಜು ಹಾಗೂ ಸೇವೆಗಳ ಅನುಷ್ಠಾನದಲ್ಲಿ, ಸದರಿ ಆದೇಶವನ್ನು ಅಳವಡಿಸಿಕೊಳ್ಳಲು ದಿನಾಂಕ 09/09/2020 ರಂದು ನಡೆದ 121 ನೇ ಮಂಡಳಿ ಸಭೆಯಲ್ಲಿ ಮಂಡಿಸಿ, ಎಲ್ಲಾ ಕಾಮಗಾರಿಗಳಿಗೂ ಸದರಿ ಆದೇಶವನ್ನು ಅಳವಡಿಸಿಕೊಳ್ಳಲು ಅನುಮೋದನೆ ಪಡೆಯಲಾಗಿದೆ.

4. ದಿನಾಂಕ 02/11/2020 ರ ನಿಗಮದ ಆದೇಶದಲ್ಲಿ ಮೇಲಿನ ಸರ್ಕಾರದ ಆದೇಶ /ಸುತ್ತೋಲೆಯನ್ವಯ ಹಾಗೂ ಮಂಡಳಿ ಸಭೆಯ ನಡವಳಿಯನ್ವಯ ನಿಗಮದ ಕಾಮಗಾರಿಗಳು/ ಸೇವೆಗಳು ಮತ್ತು ಸಾಮಾಗ್ರಿಗಳ ಸಂಗ್ರಹಣಾ ಕಾರ್ಯದ ಅನುಷ್ಠಾನದಲ್ಲಿ ಗುತ್ತಿಗೆ ಒಪ್ಪಂದದಲ್ಲಿ ಅವಧಿ ವಿಸ್ತರಣೆ ಮಾಡುವ ಅಧಿಕಾರವನ್ನು ಎಲ್ಲಾ ವಲಯಗಳ ಮುಖ್ಯ ಇಂಜಿನಿಯರುಗಳಿಗೆ ನೀಡಲಾಗಿದೆ. ಹಾಗೂ ಭದ್ರತಾ

ಠೇವಣಿ ಹಿಂಪಾವತಿ ಪ್ರಸ್ತಾವನೆಗಳನ್ನು ಪ್ರಕರಣವಾರು ಪರಿಶೀಲಿಸಿ, ಹಿಂಪಾವತಿ ಮಾಡಬೇಕಿದ್ದಲ್ಲಿ ಸೂಕ್ತ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಗಳನ್ನು ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಗಾಗಿ ಸಲ್ಲಿಸಲು ಸೂಚಿಸಿದೆ. ಸದರಿ ಆದೇಶದ ಅನ್ವಯಿಕೆಯು ತಾತ್ಕಾಲಿಕವಾಗಿದ್ದು, ದಿನಾಂಕ 20/02/2020 ರಿಂದ 6 ತಿಂಗಳ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆಯೆಂದು ತಿಳಿಸಿದೆ.

5. ದಿನಾಂಕ 21/11/2020 ರ ನಿಗಮದ ಆದೇಶದಲ್ಲಿ Turnkey ಕಾಮಗಾರಿಗಳ ಟೆಂಡರ್ ದಾಖಲೆಗಳಲ್ಲಿ ಗುತ್ತಿಗೆ ಕಾರ್ಯಕ್ಷಮತೆ ಬ್ಯಾಂಕ್ ಖಾತರಿಯನ್ನು (Contract performance Bank Guarantee) ಶೇಕಡಾ 10 ರ ಬದಲಾಗಿ ಶೇಕಡಾ 5 ರಂತೆ ಅಳವಡಿಸಿಕೊಳ್ಳಲು ಅನುಮೋದಿಸಿದೆ. ಹಾಗೂ ಅಂಗೀಕಾರ ಪತ್ರ (Letter of Award / Letter of Intent) ನೀಡಲು ಬಾಕಿ ಇರುವ ಕಾಮಗಾರಿಗಳಿಗೂ ಸಹ ಗುತ್ತಿಗೆ ಕಾರ್ಯಕ್ಷಮತೆ ಬ್ಯಾಂಕ್ ಖಾತರಿಯನ್ನು ಶೇಕಡಾ 5 ಕ್ಕೆ ನಿಗದಿಪಡಿಸಿ ಕಾಮಗಾರಿಗಳಿಗೆ ಕಾರ್ಯದೇಶ ನೀಡಲು ಆದೇಶಿಸಲಾಗಿದೆ.

6. ಸರ್ಕಾರದ ದಿನಾಂಕ 22/12/2020 ರ ಆದೇಶದಲ್ಲಿ ಕೋವಿಡ್-19 ಮಹಾಮಾರಿಯ ಹಿನ್ನೆಲೆಯಲ್ಲಿ ಹಲವು ವಾಣಿಜ್ಯ ಸಂಘಟನೆಗಳು ಮತ್ತು ಗುತ್ತಿಗೆದಾರರು ಆರ್ಥಿಕ ಸಂಕಷ್ಟವನ್ನು ಎದುರಿಸುವಂತಾಗಿದ್ದು, ಗುತ್ತಿಗೆದಾರರು ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಗಳಲ್ಲಿ ಸ್ಪರ್ಧಾತ್ಮಕವಾಗಿ ಭಾಗವಹಿಸಲು ಅನುಕೂಲವಾಗುವಂತೆ ಮತ್ತು ಸರ್ಕಾರಕ್ಕೆ ಸ್ಪರ್ಧಾತ್ಮಕ ದರ ಪಡೆಯುವ ಹಿತದೃಷ್ಟಿಯಿಂದ, ಮಾದರಿ ಟೆಂಡರ್ ದಾಖಲೆಗಳಲ್ಲಿನ ಇಎಂಡಿ (EMD), ಭದ್ರತಾ ಠೇವಣಿ (Performance security) ಹಾಗೂ ಹೆಚ್ಚುವರಿ ಭದ್ರತಾ ಠೇವಣಿ (Additional performance security) ಷರತ್ತುಗಳಲ್ಲಿ, **ದಿನಾಂಕ 31/12/2021 ರವರೆಗೆ ಮಾತ್ರ** ಅನ್ವಯಿಸುವಂತೆ ಕೆಲವೊಂದು ರಿಯಾಯಿತಿಗಳನ್ನು ನೀಡಲು ಆದೇಶಿಸಲಾಗಿದೆ.

7. ಸರ್ಕಾರದ ಮೇಲಿನ ಆದೇಶವನ್ನು ನಿಗಮದಲ್ಲಿ ಅಳವಡಿಸಿಕೊಳ್ಳಲು ಸಲ್ಲಿಸಲಾದ ನಿಗಮ ಕಾರ್ಯಾಲಯದ ಟಿಪ್ಪಣಿಯಲ್ಲಿ ಸದರಿ ಪ್ರಸ್ತಾವನೆಗೆ ಅನುಮೋದನೆ ಪಡೆಯಲಾಗಿದ್ದು, ಈ ಸಂಬಂಧ ಕೆಳಕಂಡಂತೆ ಆದೇಶಿಸಲಾಗಿದೆ.

**ಕವಿಪ್ರನಿನಿ/ಆದೇಶ ಸಂಖ್ಯೆ: ಬಿ9/2020/07-08/ಬೆಂಗಳೂರು** **ದಿನಾಂಕ 05/01/2021**

ಸರ್ಕಾರದ ದಿನಾಂಕ 22/12/2020 ರ ಆದೇಶದನ್ವಯ ನಿಗಮದ ಎಲ್ಲಾ ಕಾಮಗಾರಿಗಳು/ ಸೇವೆಗಳು ಮತ್ತು ಸಾಮಾಗ್ರಿಗಳ ಸಂಗ್ರಹಣಾ ಕಾರ್ಯದ ಅನುಷ್ಠಾನದಲ್ಲಿ ಠೇವಣಿ ಪಡೆಯುವ ಸಂಬಂಧ ಈ ಕೆಳಕಂಡಂತೆ ಟೆಂಡರ್ ದಾಖಲೆಗಳಲ್ಲಿ ಮಾರ್ಪಾಡುಗಳನ್ನು ಅಳವಡಿಸಿಕೊಳ್ಳಲು ಹಾಗೂ ಅದರಂತೆ ಕ್ರಮಕೈಗೊಳ್ಳಲು ಆದೇಶಿಸಿದೆ.

1. **ಇಎಂಡಿ (EMD):** ದಿನಾಂಕ 31/12/2021 ರವರೆಗೆ ಕರೆಯಲಾಗುವ ಟೆಂಡರ್ ಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಪಡೆಯಲಾಗುತ್ತಿರುವ ಇಎಂಡಿ ಬದಲಾಗಿ, ಈ ಆದೇಶದ ಅನುಬಂಧದಲ್ಲಿ ಲಗತ್ತಿಸಿರುವ EMD Declaration ನಮೂನೆಯನ್ನು ಟೆಂಡರ್ ದಾಖಲೆಗಳಲ್ಲಿ ಅಳವಡಿಸಿ ಗುತ್ತಿಗೆದಾರರಿಂದ Declaration ಪಡೆಯುವುದು.

2. **ಭದ್ರತಾ ಠೇವಣಿ (Performance security):** ಭದ್ರತಾ ಠೇವಣಿ ಮೊತ್ತವನ್ನು ಹಾಲಿ ಪಡೆಯುತ್ತಿರುವ ಶೇಕಡಾ 10-5 ರಿಂದ ಗುತ್ತಿಗೆ ಮೊತ್ತದ ಶೇಕಡಾ 3 ಕ್ಕೆ ನಿಗಧಿಪಡಿಸಲಾಗಿರುತ್ತದೆ. ಸದರಿ ರಿಯಾಯಿತಿಯು ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ ಒಪ್ಪಂದಗಳಿಗೂ (Existing Contract) ಮತ್ತು ದಿನಾಂಕ 31/12/2021 ರವರೆಗೆ ಕರೆಯಲಾಗುವ ಟೆಂಡರ್ ಮತ್ತು ಮಾಡಿಕೊಳ್ಳುವ ಒಪ್ಪಂದಗಳಿಗೆ ಅನ್ವಯವಾಗುವುದು. ಆದರೆ ಚಾಲ್ತಿಯಲ್ಲಿರುವ ಒಪ್ಪಂದಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯ/ Arbitration ನಲ್ಲಿ ಪ್ರಕರಣ / ವಿವಾದವಿದ್ದಲ್ಲಿ ಅಥವಾ ಪ್ರಕರಣ/ವಿವಾದ ಉಂಟಾಗುವ ನಿರೀಕ್ಷೆ ಇದ್ದಲ್ಲಿ ಸದರಿ ರಿಯಾಯಿತಿಯು ಅನ್ವಯವಾಗುವುದಿಲ್ಲ.

3. ಹೆಚ್ಚುವರಿ ಭದ್ರತಾ ಠೇವಣಿ (Additional performance security): ದಿನಾಂಕ 31/12/2021 ರವರೆಗೆ ಕರೆಯಲಾಗುವ ಟೆಂಡರ್ ಮತ್ತು ಮಾಡಿಕೊಳ್ಳುವ ಒಪ್ಪಂದಗಳಿಗೆ ಸಂಬಂಧಿಸಿದಂತೆ ಅಸಮತೋಲಿತ ಟೆಂಡರ್ (Unbalanced tender) ಗಳಲ್ಲಿ ಅಗತ್ಯವೆಂದು ನಿಗದಿಪಡಿಸಲಾಗುವ ಹೆಚ್ಚುವರಿ ಭದ್ರತಾ ಠೇವಣಿ ಮೊತ್ತದ, ಶೇಕಡಾ 50 ರಷ್ಟು ಮೊತ್ತವನ್ನು ಮಾತ್ರ ಠೇವಣಿಯಾಗಿ ಪಡೆಯತಕ್ಕದ್ದು.

4. ಈ ಆದೇಶದಂತೆ ಪಡೆಯಲಾಗುವ ಭದ್ರತಾ ಠೇವಣಿ ಮತ್ತು ಹೆಚ್ಚುವರಿ ಭದ್ರತಾ ಠೇವಣಿಯು ಆಯಾ ಒಪ್ಪಂದದ ಪೂರ್ಣ ಅವಧಿಗೆ ಅನ್ವಯವಾಗುತ್ತದೆ. ಯಾವುದೆ ಕಾರಣಕ್ಕೂ ದಿನಾಂಕ 31/12/2021 ರ ನಂತರ ಪರಿಷ್ಕರಿಸತಕ್ಕದ್ದಲ್ಲ.

5. ಈ ಆದೇಶವನ್ನು ಸದ್ಯದ ಕೋವಿಡ್-19 ಪರಿಸ್ಥಿತಿ ಹಿನ್ನೆಲೆಯಲ್ಲಿ ಗುತ್ತಿಗೆದಾರರ ಆರ್ಥಿಕ ಹಿತದೃಷ್ಟಿಯಿಂದ ಸರ್ಕಾರದ ಆದೇಶದನ್ವಯ ಹೊರಡಿಲಾಗುತ್ತಿದ್ದು, ಇದನ್ನು ಪೂರ್ವ ನಿದರ್ಶನವೆಂದು ಪರಿಗಣಿಸತಕ್ಕದ್ದಲ್ಲ.

6. ಒಂದು ವೇಳೆ ಮಾದರಿ ಟೆಂಡರ್ ದಾಖಲೆಗಳಲ್ಲಿ ನಿಗಧಿ ಪಡಿಸಿರುವಂತೆ ಇಎಂಡಿ, ಭದ್ರತಾ ಠೇವಣಿ ಮತ್ತು ಹೆಚ್ಚುವರಿ ಭದ್ರತಾ ಠೇವಣಿಯನ್ನು ಪಡೆಯುವುದು ಅತ್ಯಂತ ಅವಶ್ಯವೆಂದು ಕಂಡುಬಂದ ಸಂದರ್ಭದಲ್ಲಿ ಮಾತ್ರ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿ ನಿಗಮದ ಅನುಮೋದನೆ ಪಡೆದು ಕ್ರಮವಹಿಸುವುದು.

7. ಮೇಲಿನ ಮಾರ್ಪಾಡುಗಳು ಎಲ್ಲಾ ಕಾಮಗಾರಿ, ಸರಕು, ಸೇವೆಗಳು ಮತ್ತು ಸಮಾಲೋಚನಾ ಸೇವೆಗಳ ಸಂಗ್ರಹಣೆಗಳಲ್ಲಿ ಸಂದರ್ಭಕ್ಕನುಸಾರವಾಗಿ ಅನ್ವಯವಾಗುತ್ತದೆ. ನಿಗಮದ ಮಾನವ ಸೇವೆಗಳ ಸಂಗ್ರಹಣೆ ಟೆಂಡರ್ ದಾಖಲೆಗಳಲ್ಲಿ ಟೆಂಡರ್‌ದಾರರು ಸಲ್ಲಿಸುವ ಶೇಕಡಾ performance Bank Guarantee ಯ ಮೇಲೆ ಟೆಂಡರನ್ನು ಪರಿಗಣಿಸುವ ಕಾರಣ, ಭದ್ರತಾ ಠೇವಣಿಯ ಸಂಬಂಧದ ಮೇಲಿನ ಮಾರ್ಪಾಡು ಸದರಿ ಟೆಂಡರ್ ಗಳಿಗೆ ಅನ್ವಯವಾಗುವುದಿಲ್ಲ.

8. ಉಳಿದಂತೆ ನಿಗಮದಲ್ಲಿ ಅಳವಡಿಸಿಕೊಂಡಿರುವ ಎಲ್ಲಾ ಟೆಂಡರ್ ದಾಖಲೆಗಳಲ್ಲಿನ ಯಾವುದೇ ಅಂಶಗಳಲ್ಲಿ ಬದಲಾವಣೆ ಇರುವುದಿಲ್ಲ.

**ಕೋವಿಡ್-19 ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಮೇಲ್ಕಂಡ ಆದೇಶದ ಅನ್ವಯಿಕೆಯು ತಾತ್ಕಾಲಿಕವಾಗಿದ್ದು, ದಿನಾಂಕ 31/12/2021 ರವರೆಗೆ ಮಾತ್ರ ಅನ್ವಯಿಸುತ್ತದೆ.**

**ಆದೇಶದ ಮೇರೆಗೆ**

5/1/2021.

ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಎಲ್ಲಾ ಮುಖ್ಯ ಇಂಜನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜನಿಯರ್ (ವಿ)/ (ಸಿವಿಲ್), ಕವಿಪ್ರನಿನಿ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
6. ಅಧೀಕ್ಷಕ ಇಂಜನಿಯರ್ (ವಿ), (ಐಟಿ) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರುಗಳು (ವಿ)/ (ಸಿವಿಲ್), ಕವಿಪ್ರನಿನಿ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಕವಿಪ್ರನಿನಿ ಆದೇಶ ಸಂಖ್ಯೆ: ಬಿ9/2020/07-08 ದಿನಾಂಕ 05/01/2021

## Annexure

## EMD Declaration

I, hereby submit a declaration that the tender submitted by the undersigned, on behalf of the tenderer **..............................(Name of the Tenderer)**, shall not be withdrawn or modified during the period of validity or extended period of validity.

I, on behalf of the tenderer..................... **(Name of the Tenderer)**, also accept the fact that in case the tender is withdrawn or modified during the period of its validity/ exetended validity period or if we fail to sign the contract in case the contract is awarded to us or we fail to submit a Performance Security and Adiditional Perfromance Security, if any, before the deadline fixed in the Tender Document, then ...........................(name of the tenderer) will be debarred for participation in the tendering process for the Procurements of this Procurement Entity for a period of **One year** from the date of default.

(Signature of the Authorized Signatory,
Official Seal)